



# ಪವಿತ್ರ ಪತ್ರಮಾಲೆ

## ಸ್ವಾಮಿ ತುರೀಯಾನಂದಜಿ ಅವರ ಒಂದು ಪತ್ರ

*ಬೇಲೂರು ಮಠ*
*೪ ಏಪ್ರಿಲ್ ೧೯೧೭*

ಪ್ರೀತಿಯ...

ಏಪ್ರಿಲ್ ೧ ರ ನಿನ್ನ ಪತ್ರ ಸ್ವೀಕರಿಸಿ, ಸಂತೋಷಗೊಂಡೆನು. ನೀನು ಆರೋಗ್ಯವಾಗಿರುವೆಯೆಂಬುದು ಮತ್ತು ನಿನ್ನ ಮನಸ್ಸು ಹಿಂದಿನಂತೆ ಖಿನ್ನತೆಯಿಂದ ಬಳಲುತ್ತಿಲ್ಲವೆಂಬುದು ನಿಜಕ್ಕೂ ಒಳ್ಳೆಯ ಸುದ್ದಿಯೇ ಸರಿ. ದಿನದಲ್ಲಿ ಹೆಚ್ಚಿನ ಕಾಲ ನೀನು ಆಧ್ಯಾತ್ಮಿಕ ಚಿಂತನೆಗಳಲ್ಲಿ ತೊಡಗಿರುವುದು ಮತ್ತು ಸಾಧುಸಂಗಕ್ಕೆ ಹಾತೊರೆಯುತ್ತಿರುವುದು ನಿಜಕ್ಕೂ ಒಳ್ಳೆಯ ಸಂಕೇತ. ನೀನು ಪ್ರಾಪಂಚಿಕ ಮಾತುಕತೆಗೆ ಗಮನ ಕೊಡದಿರುವುದು ಮತ್ತು ಪ್ರಾಪಂಚಿಕ ಜನರ ಸಹವಾಸವನ್ನು ಮಾಡದಿರುವುದು ಒಳ್ಳೆಯದು ಮಾತ್ರವಲ್ಲ, ಅತ್ಯವಶ್ಯ ಕೂಡ.



ಭಗವಂತನೇ ಎಲ್ಲರ ಮಾರ್ಗವೂ, ಹಾಗೆಯೇ ಧ್ಯೇಯವೂ ಆಗಿದ್ದಾನೆ. ಯಾವತ್ತೂ ಅವನನ್ನು ಹೃದಯದಲ್ಲಿ ಧ್ಯಾನಿಸುತ್ತಿರು. ಚಿಂತಿಸದಿರು, ಅವನು ಎಲ್ಲವನ್ನೂ ಸರಿಪಡಿಸುತ್ತಾನೆ. ಎಲ್ಲಿ ಭಗವಂತನು ನಿನ್ನನ್ನು ಇರಿಸುತ್ತಾನೆಯೋ, ಅಲ್ಲೇ ಇದ್ದುಕೊಂಡು, ನಿನ್ನ ಮನಸ್ಸು ಅವನಲ್ಲಿ ಸದಾ ನೆಲೆಸಿರುವಂತೆ ಅನವರತವೂ ಪ್ರಾರ್ಥಿಸುತ್ತಿರು. ಹಾಗೆಯೇ, ಭಗವಂತನು ಹೇಗೆ ಇಟ್ಟಿದ್ದಾನೆಯೋ, ಅದು ನಿನ್ನ ಒಳ್ಳೆಯದಕ್ಕೇ ಎಂದು ತಿಳಿದುಕೋ. ಸೂಫಿ ಸಂತಕವಿ ಹಫೀಜ್ ಹೀಗೆ ಹೇಳುತ್ತಾನೆ: "ನನ್ನ ಪ್ರಿಯತಮನು ಬಡತನದ ಧೂಳಿನಲ್ಲಿ ನಾನು ಹೊರಳಾಡುವುದನ್ನು ನೋಡಲು ಇಷ್ಟಪಟ್ಟರೆ, ಅದಕ್ಕೆ ಬದಲಾಗಿ ನಾನು ನನ್ನ ದೃಷ್ಟಿಯನ್ನು ಸ್ವರ್ಗದ ಸರೋವರದ ಮೇಲೆ ನೆಟ್ಟಿದ್ದರೆ, ನಿಜವಾಗಲೂ ನಾನು ಅಲ್ಪದೃಷ್ಟಿಯವನು." ಭಗವಂತನು ಎಲ್ಲಿ ನಿನ್ನನ್ನು ಇರಿಸಿದ್ದಾನೆಯೋ, ಅಲ್ಲಿಯೇ ತೃಪ್ತಿಯಿಂದ ಇರುವುದು ಯಾವತ್ತೂ ಒಳ್ಳೆಯದು. ಭಗವಂತನು ಅಪಾರ ದಯಾಳು ಮತ್ತು ಸರ್ವವ್ಯಾಪಿ ಕೂಡ. ಆತನು ಪ್ರತಿಯೊಬ್ಬನಿಗೂ ಯಾವುದು ಒಳಿತು ಎಂಬುದನ್ನು ಅರಿತಿರುತ್ತಾನೆ. ಹೀಗಾಗಿ ಅದರಂತೆ ವ್ಯವಸ್ಥೆಯನ್ನು ಕಲ್ಪಿಸಿಕೊಡುತ್ತಾನೆ. ಆದರೆ ನಾವು ನಮ್ಮ ಇಚ್ಛೆಗೆ ಅನುಸಾರವಾಗಿ ಅವನಿಂದ ಏನನ್ನೋ ಪಡೆಯಲು ಹೋಗಿ, ಜೀವನವನ್ನು ಹಾಳುಮಾಡಿಕೊಳ್ಳುತ್ತೇವೆ.

"ಯಾರಿಗೆ ಪ್ರಾಪಂಚಿಕ ಬಯಕೆಗಳು ಇವೆಯೋ ಅವರು, ಕಾಡಿನ ಏಕಾಂತದಲ್ಲಿಯೂ ಚಂಚಲಚಿತ್ತರಾಗಿರುತ್ತಾರೆ. ಯಾರು ತಮ್ಮ ಇಂದ್ರಿಯಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಂಡಿರುತ್ತಾರೋ, ಅವರು ಜನಜಂಗುಳಿಯಿರುವ ಮನೆಯಲ್ಲಿ ಇದ್ದರೂ, ತಪಸ್ಸನ್ನು ಆಚರಿಸುತ್ತಾರೆ" (ಹಿತೋಪದೇಶ, ಅಧ್ಯಾಯ ೪). ಇದೇ ನಿಜವಾದ ಸತ್ಯ. ಭಗವಂತನನ್ನು ಈ ರೀತಿಯಲ್ಲಿ ಪ್ರಾರ್ಥನೆ ಮಾಡುವುದರಲ್ಲಿ ಯಾವ ಹಾನಿಯೂ ಇಲ್ಲ: " ಓ ಭಗವಂತ, ನಾನೆಲ್ಲಿದ್ದರೂ, ನಾನೆಂದೂ ನಿನ್ನನ್ನು ಮರೆಯದಿರುವಂತೆ ಮಾಡು. ನಾನು ಯಾವಾಗಲೂ ನಿನ್ನ ಭಕ್ತರ ಸಂಗವನ್ನು ಹೊಂದುವಂತಾಗಲಿ. ದಯವಿಟ್ಟು ನನ್ನನ್ನು ಪ್ರಾಪಂಚಿಕರ ಸಂಪರ್ಕದಿಂದ ದೂರವಿರಿಸು." ಭಗವಂತನನ್ನು ಹೃದಯಪೂರ್ವಕವಾಗಿ ಕೂಗಿ ಕರೆ. ಅವನು ಖಂಡಿತವಾಗಿಯೂ ನಿನಗೆ ಒಳ್ಳೆಯದನ್ನೇ ಮಾಡುವನು.

ಭಗವಂತನು ನಿನ್ನನ್ನು ಎಷ್ಟು ಕಾಲ ಮನೆಯಲ್ಲಿ ಇರಿಸುತ್ತಾನೆಯೋ, ಅಲ್ಲಿಯವರೆಗೆ ನಿನ್ನ ತಾಯಿಯನ್ನು ಭಗವತಿಯ ಅವತಾರವೆಂದೇ ಪರಿಗಣಿಸಿ ಸೇವೆ ಮಾಡು. ಇದರಿಂದ ನಿನಗೆ ಒಳ್ಳೆಯದಾಗುತ್ತದೆ. ಭಗವಂತನು ಯಾವ ಮಾರ್ಗವನ್ನು ನಿನಗೆ ಗುರುತು ಮಾಡಿಟ್ಟಿದ್ದಾನೆಯೋ, ಅದನ್ನು ಯಾವ ಸಂದೇಹವೂ ಇಲ್ಲದೆ ಅನುಸರಿಸು. ಭಗವಂತನ ಮಾರ್ಗದಲ್ಲಿ ನಡೆಯುವುದೇ ನನ್ನ ಕರ್ತವ್ಯ, ನಿನ್ನ ಕರ್ತವ್ಯ ಮತ್ತು ಎಲ್ಲ ಜನರ ಕರ್ತವ್ಯ. ಇದಕ್ಕಿಂತ ಬೇರೆಯಾದ ಕರ್ತವ್ಯ ಯಾವುದೂ ಇಲ್ಲ.

ಭಗವಂತನನ್ನು ನಿನ್ನ ಹೃದಯ ಮತ್ತು ಆತ್ಮಪೂರ್ವಕವಾಗಿ ಆರಾಧಿಸು. ಅವನೇ ನಿನ್ನ ಪೂಜೆಗೆ ಅರ್ಹನಾದ ಇಷ್ಟದೈವ. ಅವನನ್ನು ಆರಾಧಿಸಿದರೆ, ಎಲ್ಲ ಕರ್ತವ್ಯಗಳೂ ಕೊನೆಗೊಳ್ಳುವವು. ಇದು ಹೇಗೆಂದರೆ, ಬುಡದಲ್ಲಿರುವ ಬೇರಿಗೆ ನೀರೆರೆದರೆ, ಇಡೀ ಮರವು ಪುಷ್ಟಿಯನ್ನು ಪಡೆದುಕೊಳ್ಳುತ್ತದೆ ಮತ್ತು ಹೂವು ಮತ್ತು ಹಣ್ಣುಗಳನ್ನು ಬಿಡುತ್ತದೆ.

*ಇಂತಿ ನಿನ್ನ ಕಲ್ಯಾಣಾಭಿಲಾಷಿ*

**ತುರೀಯಾನಂದ**